# ಧೋನಿ ಚೆಂಡು ಕೈಗಿಟ್ಟಾಗ ಪುಳಕಗೊಂಡಿದ್ದೆ

**2007ರ ವಿಶ್ವಕಪ್ ಹೀರೊ ಜೋಗಿಂದರ್ ಸಿಂಗ್ ಸಂದರ್ಶನ**

'ಕೊನೆಯ ಓವರ್‌ನಲ್ಲಿ ನೀನೇ ಬೌಲ್ ಮಾಡು ಎಂದು ಮಹೇಂದ್ರ ಸಿಂಗ್ ಧೋನಿ ಚೆಂಡು ಕೈಗಿಟ್ಟಾಗ ಪುಳಕಗೊಂಡಿದ್ದೆ. ಅವರ ಸ್ಫೂರ್ತಿಯ ಮಾತುಗಳಿಂದಲೇ ಟ್ರೋಫಿ ಗೆಲ್ಲಲು ಸಾಧ್ಯವಾಯಿತು.'

2007ರ ಚೊಚ್ಚಲ ಟಿ–20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಲು ಕಾರಣರಾದ ವೇಗದ ಬೌಲರ್ ಜೋಗಿಂದರ್ ಶರ್ಮಾ 'ಸುಧಾ'ಕ್ಕಾಗಿ ಹಂಚಿಕೊಂಡು ನೆನಪುಗಳು ಇವು.

ದಕ್ಷಿಣ ಆಫ್ರಿಕಾದ ವಾಂಡರರ್ಸ್‌ನಲ್ಲಿ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಎದುರಾಳಿ ಪಾಕಿಸ್ತಾನ ತಂಡದ ಗೆಲುವಿಗೆ ಕೊನೆಯ ಓವರ್‌ನಲ್ಲಿ 13 ರನ್ ಅಗತ್ಯವಿತ್ತು. ಒಂದು ವಿಕೆಟ್ ಮಾತ್ರ ಉಳಿದಿತ್ತು. ಆಗ ಭಾರತ ತಂಡದ ನಾಯಕರಾಗಿದ್ದ ಧೋನಿ ಅವರು ಜೋಗಿಂದರ್‌ಗೆ ಬೌಲ್ ಮಾಡುವ ಅವಕಾಶ ಕೊಟ್ಟಿದ್ದರು. ಏಳು ರನ್ ಮಾತ್ರ ನೀಡಿ ಪಾಕ್ ತಂಡದ ಮಿಸ್ಬಾ ಉಲ್ ಹಕ್ ಅವರನ್ನು ಔಟ್ ಮಾಡಿ ಟ್ರೋಫಿಯ ಕನಸನ್ನು ಜೋಗಿಂದರ್ ನನಸು ಮಾಡಿದ್ದರು. ಮುಂದಿನ ತಿಂಗಳು ಟಿ–20 ವಿಶ್ವಕಪ್ ಹಿನ್ನೆಲೆಯಲ್ಲಿ ಆ ದಿನಗಳನ್ನು ಜೋಗಿಂದರ್ ನೆನಪಿಸಿಕೊಂಡಿದ್ದಾರೆ. ಜೋಗಿಂದರ್ ಈಗ ಹರಿಯಾಣದಲ್ಲಿ ಡಿಎಸ್‌ಪಿ ಆಗಿದ್ದಾರೆ.

**◆ ಚೊಚ್ಚಲ ಟಿ–20 ವಿಶ್ವಕಪ್ ಗೆದ್ದು 14 ವರ್ಷಗಳಾಗಿವೆ. ಆ ನೆನಪುಗಳನ್ನು ಮೆಲುಕು ಹಾಕುವುದಾದರೆ?**

ನನ್ನ ಕ್ರಿಕೆಟ್ ಜೀವನಕ್ಕೆ ಸಿಕ್ಕ ಮಹತ್ವದ ತಿರುವು ಅದು. ಇದೇ ಕ್ರೀಡೆಯಲ್ಲಿ ದೊಡ್ಡ ಸಾಧನೆ ಮಾಡಬೇಕು ಎನ್ನುವ ಆಸೆ ಹೊತ್ತು ಬಂದ ಆರಂಭದ ದಿನಗಳಲ್ಲಿ ಅಂದುಕೊಂಡಿದ್ದ ಕನಸು, ನನಸು ಮಾಡಿಕೊಂಡು ಸಂಭ್ರಮದ ದಿನವದು. ವಿಶ್ವಕಪ್ ಟೂರ್ನಿಯ ಫೈನಲ್ ಬಳಿಕ ಜನ ನನ್ನನ್ನು ಗುರುತಿಸುವ ದೃಷ್ಟಿ ಬದಲಾಯಿತು. ಹೆಚ್ಚು ಜನ ಗುರುತಿಸುವಂತಾಯಿತು. ಜನರ ಮನದಲ್ಲಿ ಈಗಲೂ ನಾನು ಸವಿ ನೆನಪಾಗಿ ಉಳಿಯಲು ಫೈನಲ್‌ನಲ್ಲಿ ಮಾಡಿದ ಬೌಲಿಂಗ್ ಕಾರಣ. ಇದರಿಂದ ನನ್ನ ತಂಡ ಹಾಗೂ ದೇಶ ಜಗತ್ತಿನ ಎದುರು ಹೆಮ್ಮೆಯಿಂದ ಬೀಗುವಂತಾಯಿತು. ಯಾವುದೇ ಕ್ರಿಕೆಟಿಗನಾದರೂ ವಿಶ್ವಕಪ್ ತಂಡದ ಸದಸ್ಯನಾಗಿರಬೇಕು ಎಂದು ಬಯಸುವುದು ಸಹಜ. ಭಾರತೀಯ ಕ್ರಿಕೆಟ್ ಪ್ರೇಮಿಗಳ ಹೃದಯ ಗೆದ್ದ ಸಾರ್ಥಕ ಭಾವ ಈಗಲೂ ನನ್ನಲ್ಲಿದೆ.

**◆ ಫೈನಲ್ ಪಂದ್ಯದ ಕೊನೆಯ ಓವರ್‌ನಲ್ಲಿ ಧೋನಿ ಬೌಲ್ ಮಾಡಲು ನಿಮಗೆ ಅವಕಾಶ ಕೊಡಬಹುದು ಎನ್ನುವ ನಿರೀಕ್ಷೆ ಇತ್ತೇ?**

ನನಗೆ ಅಥವಾ ಹರಭಜನ್ ಸಿಂಗ್ ಇಬ್ಬರಲ್ಲಿ ಒಬ್ಬರಿಗೆ ಮಾತ್ರ ಬೌಲ್ ಕೊಡಲು ಧೋನಿ ಯೋಜಿಸಿದ್ದರು. ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಆ ತಂಡದ ಗೆಲುವಿಗೆ ಕೊನೆಯ ಓವರ್‌ನಲ್ಲಿ 22 ರನ್ ಅಗತ್ಯವಿತ್ತು. ಆಗಲೂ ನಾನೇ ಬೌಲ್ ಮಾಡಿ ಆರು ರನ್ ಮಾತ್ರ ನೀಡಿ ಎರಡು ವಿಕೆಟ್‌ಗಳನ್ನು ಪಡೆದಿದ್ದೆ. ಹೀಗಾಗಿ ಫೈನಲ್ ಪಂದ್ಯದಲ್ಲಿ ನನಗೆ ಚೆಂಡು ನೀಡಬಹುದು ಎನ್ನುವ ನಿರೀಕ್ಷೆಯಿತ್ತು.

ಧೋನಿ ಅವರೊಂದಿಗೆ ರಣಜಿ ಟೂರ್ನಿಯಲ್ಲಿ ಆಡಿದ್ದೇನೆ. ಸಾಕಷ್ಟು ಸಮಯ ಅವರೊಂದಿಗೆ ಅಭ್ಯಾಸ ಮಾಡಿದ್ದೇನೆ. 2004ರ ಭಾರತ ತಂಡದ ಶಿಬಿರದಲ್ಲಿ ನನ್ನ ಬೌಲಿಂಗ್ ನೋಡಿದ್ದರು. ಬೌಲಿಂಗ್‌ನ ವಿವಿಧ ಕೌಶಲಗಳನ್ನು ಕಲಿಯಲು ಟೆನಿಸ್ ಚೆಂಡಿನಿಂದ ಅಭ್ಯಾಸ ಮಾಡುತ್ತಿದ್ದೆ. ಇದನ್ನೂ ಧೋನಿ ಗಮನಿಸಿದ್ದರು.

**◆ ಕೊನೆಯ ಓವರ್‌ಗೂ ಮೊದಲು ಧೋನಿ ನಿಮಗೆ ಹೇಳಿದ್ದೇನು?**



ಒತ್ತಡಕ್ಕೆ ಒಳಗಾಗದೆ ಎಂದಿನಂತೆ ಸಹಜವಾಗಿ ಬೌಲ್ ಮಾಡು, ನಿನ್ನ ಸಾಮರ್ಥ್ಯವನ್ನು ತೋರಿಸು ಎಂದಿದ್ದರು. ಕೊನೆಯ ವಿಕೆಟ್ ಪಡೆಯುವಂತೆ ತಿಳಿಸಿದ್ದರು. ಪ್ರತಿ ಎಸೆತದ ಬಳಿಕವೂ ಚೆಂಡು ಹೇಗೆ ಎಸೆದರೆ ವಿಕೆಟ್ ಪಡೆಯಲು ಸಾಧ್ಯ ಎನ್ನುವ ಮಾರ್ಗದರ್ಶನ ಮಾಡಿದ್ದರು.

**◆ ಮತ್ತೊಂದು ಟಿ–20 ವಿಶ್ವಕಪ್ ಬಂದಿದೆ. ಭಾರತ ತಂಡದಲ್ಲಿ ಏನು ಬದಲಾವಣೆಯಾಗಿದೆ ಎನಿಸುತ್ತದೆ?**

ಐಪಿಎಲ್ ಆರಂಭವಾದ ಬಳಿಕ ಚುಟುಕು ಕ್ರಿಕೆಟ್‌ನ ಚಹರೆಯೇ ಬದಲಾಗಿದೆ. ಮೊದಲಾದರೆ ಅವಕಾಶಗಳು ಸೀಮಿತ ಸಂಖ್ಯೆಯಲ್ಲಿದ್ದವು. ಈಗ ಹೇರಳ ಅವಕಾಶಗಳಿವೆ. ಭಾರತ 'ಎ' ತಂಡದ ಟೂರ್ನಿಗಳಿವೆ, ಐಪಿಎಲ್ ಇದೆ. ಐಪಿಎಲ್‌ನಿಂದಾಗಿ ಭಾರತದ ಬೆಂಚ್ ಸ್ಟ್ರೆಂಥ್ ಹೆಚ್ಚಾಗಿದೆ. ಆಟಗಾರರ ಪಟ್ಟಿ ದೊಡ್ಡದಾಗಿದೆ. ಹೀಗಾಗಿ ಪ್ರತಿ ಅವಕಾಶವನ್ನು ದೊಡ್ಡ ಸಾಧನೆಯನ್ನಾಗಿ ಪರಿವರ್ತಿಸಿಕೊಳ್ಳುವ ಸವಾಲು ಈಗಿನ ಆಟಗಾರರ ಮುಂದಿದೆ.

**◆ ಕೊಹ್ಲಿ ನಾಯಕತ್ವಕ್ಕೆ ಚೊಚ್ಚಲ ಟಿ–20 ವಿಶ್ವಕಪ್ ಇದು. ವಿರಾಟ್ ನಾಯಕತ್ವದ ಬಗ್ಗೆ ಹೇಳಿ?**

ಹಿಂದೆ ಹಲವಾರು ಟೂರ್ನಿಗಳಲ್ಲಿ ಹಾಗೂ ಸರಣಿಗಳಲ್ಲಿ ವಿರಾಟ್ ತಂಡವನ್ನು ಮುನ್ನಡೆಸಿದ್ದಾರೆ. ಹೀಗಾಗಿ ಆಟಗಾರರು ಹಾಗೂ ಒತ್ತಡ ನಿರ್ವಹಣೆ ಅವರಿಗೆ ಕರಗತವಾಗಿದೆ. ಒಂದು ಸಲ ನಾಯಕರಾದ ಬಳಿಕ ಮುಗಿಯಿತು; ಅದು ಯಾವುದೇ ಟೂರ್ನಿಯಾದರೂ ತಂಡವನ್ನು ಸಮತೋಲನವಾಗಿ ಇರುವಂತೆ ನೋಡಿಕೊಳ್ಳಬೇಕು. ಧೋನಿ ವಿಶ್ವಕಪ್ ಟೂರ್ನಿಗೆ ಸಲಹೆಗಾರರಾಗಿ ನೇಮಕವಾಗಿರುವುದು ಆಟಗಾರರ ಆತ್ಮವಿಶ್ವಾಸ ಹೆಚ್ಚಿಸಿದೆ. ಹೀಗಾಗಿ ಭಾರತ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವೆನಿಸಿದೆ.

**◆ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಭಾರತದ ಬೌಲರ್‌ಗಳ ಬ್ಯಾಟಿಂಗ್ ಪ್ರದರ್ಶನದ ಬಗ್ಗೆ ಹೇಳಿ?**

ಚುಟುಕು ಕ್ರಿಕೆಟ್‌ಗಿಂತಲೂ ಟೆಸ್ಟ್ ಮಾದರಿ ಭಿನ್ನ. ಅಲ್ಲಿನ ಸವಾಲುಗಳೇ ಬೇರೆ. ಬ್ಯಾಟ್ಸ್‌ಮನ್‌ಗಳು ಹಾಗೂ ಬೌಲರ್‌ಗಳು ತಮ್ಮ ಜವಾಬ್ದಾರಿ ನಿಭಾಯಿಸಿದ್ದಾರೆ. ಬೌಲರ್‌ಗಳು ಕೂಡ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದು ತಂಡಕ್ಕೆ ಸಿಕ್ಕ ಬೋನಸ್. ■